# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 46, ಜೆ.ಸಿ ನಗರ. ಬೆಂಗಳೂರು.

ಸಂಖ್ಯೆ: ಸ.ಅ/ವಾ–46/ಪಿ.ಆರ್/ 11/2020–21

ದಿನಾಂಕ:24–03–2021

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/ 2020–21 ದಿನಾಂಕ: 21–09–2020. ರವರ ಆದೇಶದಂತೆ ದಿನಾಂಕ: 20–03–2021 ರಂದು ವಾರ್ಡ್ ನಂ:46 ಜೆ.ಸಿ.ನಗರದ ಸಿಟಿಜನ್ ಪಾರ್ಕ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

### ::ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಹಾಜರಿ |
|---|---|---|---|
| 1. | ಶ್ರೀ.ಎಸ್.ಜಿ.ರವೀಂದ್ರ. ಭಾ.ಸ.ಸೇ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು | ಹಾಜರಿ |
| 2. | ಶ್ರೀ.ಮಂಜುನಾಥ್.ಕೆ.ಎನ್ | ಸ.ಕಾ.ನಿ.ಅ (ಘನತ್ಯಾಜ್ಯ) ಹೆಬ್ಬಾಳ | ಹಾಜರಿ |
| 3. | ಶ್ರೀ.ಡಾ.ಎಸ್.ಶ್ರೀದೇವಿ | ಆರೋಗ್ಯ ವೈಧ್ಯಾಧಿಕಾರಿಗಳು ವಾಡ್ ನಂ: 46 | ಗೈರು ಹಾಜರಿ |
| 4. | ಶ್ರೀ.ಹೆಚ್.ಮೂರ್ತಿ | ಕಂದಾಯ ವಸೂಲಿದಾರರು ವಾರ್ಡ್ ನಂ: 46 | ಗೈರು ಹಾಜರಿ |
| 5. | ಶ್ರೀ.ಕೇತನ್ | ಅಸೆಸರ್ | ಹಾಜರಿ |
| 6. | ಶ್ರೀ.ಗಣೇಶ್.ಕೆ.ಎನ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ:46 | ಹಾಜರಿ |
| 7. | ಶ್ರೀ.ರಾಜಣ್ಣ | ಕಂದಾಯ ಅಧಿಕಾರಿ ಜೆ.ಸಿ ನಗರ | ಗೈರು ಹಾಜರಿ |
| 8. | ಶ್ರೀಮತಿ ಸುವರ್ಣದೇವಿ | ಕೆಲಸ ಪರಿವೀಕ್ಷಕರು ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿ |
| 9. | ಶ್ರೀ ಶಂಕರ್ .ಟಿ .ಪಿ | ಕೆಲಸ ಪರಿವೀಕ್ಷಕರು ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿ |
| 10. | ಶ್ರೀ. ಜೀವನ್ ಗೌಡ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ: 33 | ಹಾಜರಿ |
| 11. | ಶ್ರೀ.ಮಧು | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ: 34 | ಹಾಜರಿ |
| 12. | ಶ್ರೀ.ಮೂರ್ತಿ | ವರ್ಕ್ ಇನ್ಸ್‌ಪೆಕ್ಟರ್ ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿ |
| 13. | ಶ್ರೀ.ರವೀಂದ್ರ | ಅರಣ್ಯಾಧಿಕಾರಿಗಳು | ಗೈರು ಹಾಜರಿ |
| 14. | ಶ್ರೀ.ಮನೋಹರ್ | ಬೆಸ್ಕಾಂ ಇಲಾಖೆ | ಹಾಜರಿ |
| 15. | ಶ್ರೀ.ಎನ್.ಶಿವಪ್ಪ | ಘನ ತ್ಯಾಜ್ಯ ಸೂಪ್ರವೈಸರ್ | ಹಾಜರಿ |
| 16. | ಶ್ರೀ. ಮಲ್ಲಿಕಾರ್ಜುನ ನಾಯ್ಕ್ | ಸ್ಥಳಿಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ | ಹಾಜರಿ |

ವಾರ್ಡ್ ಕಾರ್ಯದರ್ಶಿಗಳಾದ ಶ್ರೀ ಗಣೇಶ್.ಕೆ.ಎನ್ ರವರು ಸಭೆಗೆ ಹಾಜರಾದ ಅಧ್ಯಕ್ಷರು, ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ ಎಸ್.ಜಿ.ರವೀಂದ್ರ, ಭಾ.ಸ.ಸೇ ರವರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಅಧ್ಯಕ್ಷರಿಗೆ ವಾರ್ಡ್ ಸಭೆ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಮಾತನಾಡಲು ಕೋರಲಾಯಿತು.

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ಸ್ವ ಪರಿಚಯ ಮಾಡಿಕೊಂಡು ವಾರ್ಡ್ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ ಬಗ್ಗೆ ಮತ್ತು ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ಸಂಬಂಧಿಸಿದ ವಿಷಯಗಳು ಮತ್ತು ಇನ್ನಿತರೇ ವಿಷಯಗಳನ್ನು ಚರ್ಚಿಸಲು ಸಾರ್ವಜನಿಕರಿಗೆ ತಿಳಿಯಪಡಿಸಿದರು.

- ದೇವೆಗೌಡ ಮುಖ್ಯ ರಸ್ತೆಯಲ್ಲಿ ಮೀನಿನ ತಳ್ಳುಗಾಡಿಗಳಿಂದ ಸಂಚಾರಕ್ಕೆ ತೊಂದರೆಯುಂಟಾಗುತ್ತಿದ್ದು ಸೂಕ್ತ ಕ್ರಮವಹಿಸುವಂತೆ ತಿಳಿಸಿದರು.
- ದೇವೆಗೌಡ ಮುಖ್ಯರಸ್ತೆಯಲ್ಲಿ ಮಿಲ್ಟ್ರೀ ವಾಲ್ ಪಕ್ಕದ ಡ್ರೈನೇಜ್ ಬ್ಲಾಕ್ ಆಗಿದ್ದು, ಇದರ ಬಗ್ಗೆ ಸೂಕ್ತ ಕ್ರಮವಹಿಸುವಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ತಿಳಿಸಲಾಯಿತು.
- ತಿಮ್ಮಯ್ಯ ಗಾರ್ಡನ್ ಮತ್ತು ಆರ್.ಟಿ ನಗರ 1ನೇ ಬ್ಲಾಕ್‌ನ ಅಡ್ಡರಸ್ತೆಯಲ್ಲಿ ಮರದ ಕೊಂಬೆಗಳು ರಸ್ತೆಗೆ ಚಾಚಿಕೊಂಡಿರುವ ಮರದ ಕೊಂಬೆಗಳನ್ನು ಕತ್ತರಿಸಲು (ಟ್ರಿಮ್ಮಿಂಗ್) ಸಾರ್ವಜನಿಕರು ಕೋರಿದರು.
- ಆರ್.ಟಿ ನಗರ 1ನೇ ಬ್ಲಾಕ್ ಮತ್ತು ತಿಮ್ಮಯ್ಯ ಗಾರ್ಡನ್ ಸುತ್ತಮುತ್ತ ಮನೆಯ ಕುಡಿಯುವ ನೀರಿಗಾಗಿ ಕೊರೆದಿರುವ ಬೋರ್‌ವೆಲ್ ನೀರನ್ನು ಹಣಕ್ಕಾಗಿ ಕೆಲವರು ಮಾರುತ್ತಿದ್ದು, ಅವರ ಬಗ್ಗೆ ಸೂಕ್ತ ಕ್ರಮ ವಹಿಸಲು ಕೋರಿದರು.
- ಆರ್.ಟಿ ನಗರ 1ನೇ ಮತ್ತು 2ನೇ ಬ್ಲಾಕ್‌ನಲ್ಲಿ, ಸರಗಳ್ಳತನ, ಮತ್ತು ಇನ್ನಿತರೆ ಸಮಸ್ಯೆಗಳು ಹೆಚ್ಚಾಗಿದ್ದು, ಇದರ ಬಗ್ಗೆ ಕ್ರಮಕೈಗೊಳ್ಳಲು ಸಭೆಯಲ್ಲಿ ಭಾಗಿಯಾಗಿದ್ದ ಪೊಲೀಸ್ ಅಧಿಕಾರಿಗಳಿಗೆ ತಿಳಿಸಲಾಯಿತು.
- ರಸ್ತೆ ಬದಿಯಲ್ಲಿ ನಿಲ್ಲಿಸಿರುವ ಮತ್ತು ಸಂಚಾರಕ್ಕೆ ಅಡ್ಡಿಪಡಿಸುತ್ತಿರುವ ವಾಹನಗಳನ್ನು ಟೋ ಮಾಡಲು, ಸೀಜ್ ಮಾಡಲು, ಅಥವಾ ದಂಡ ವಿಧಿಸಲು ಅಧಿಕಾರಿಗಳಿಗೆ ಸೂಚಿಸಲಾಯಿತು.
- 19ನೇ ಕ್ರಾಸ್ ನ ಆರ್.ಟಿ ನಗರ 1ನೇ ಬ್ಲಾಕ್‌ನಲ್ಲಿ ಅನಧಿಕೃತ ಕಟ್ಟಡವನ್ನು ನಿರ್ಮಿಸುತ್ತಿದ್ದು, ಇದರ ಬಗ್ಗೆ ಸಾರ್ವಜನಿಕರು ದೂರು ನೀಡಿದರು.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು
ವಾರ್ಡ್ ನಂ: 46, ಜೆ.ಸಿ.ನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ: 46, ಜೆ.ಸಿ ನಗರ

**ಪ್ರತಿಯನ್ನು:-**

1. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
3. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಪ್ರತಿ.